**<u>ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ಸಿಂದಗಿ.</u>**

ಸಿ.ಸಿ.ನಂ.**374/2018**
ಸಿ.ಡಬ್ಲೂ:**01**
ಪಿ.ಡಬ್ಲೂ:**02**

| | |
|---|---|
| ಸಾಕ್ಷಿದಾರರ ಹೆಸರು | - ಡಾ ಗುಂಡಪ್ಪ ಎಸ್. |
| ತಂದೆಯ/ಗಂಡನ ಹೆಸರು | - ಸಂಗಪ್ಪ |
| ವಯಸ್ಸು | - 67 ವರ್ಷ |
| ಉದ್ಯೋಗ | - ನಿವೃತ್ತ ವೈದ್ಯಾಧಿಕರಿ |
| ವಾಸಸ್ಥಳ | - ವಿಜಯಪುರ |

<u>ಸಾಕ್ಷಿಯನ್ನು ದಿನಾಂಕ **21.11.2025** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>
<u>ಮುಖ್ಯ ವಿಚಾರಣೆ : ಎ.ಪಿ.ಪಿ. ರವರಿಂದ</u>

ಜುಲೈ 2013 ರಿಂದ ಜುಲೈ 2016 ರವರೆಗೆ ನಾನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಅಧಿಕಾರಿಯಾಗಿ ಕರ್ತವ್ಯ ಮಾಡಿರುತ್ತೇನೆ. ದಿನಾಂಕ: 18.02.2014 ರಂದು ಕರ್ನಾಟಕ ರಕ್ಷಣಾ ವೇದಿಕೆರವರು ನನಗೆ ಒಂದು ದೂರು ಸಲ್ಲಿಸಿದ್ದು ಅದರಲ್ಲಿ ನಕಲಿ ವೈದ್ಯರು ಎಂದು ಪಿ.ಎನ. ತಂಗರವರು ಕೆಲಸ ಮಾಡುತ್ತಿದ್ದು ಮತ್ತು ಒಂದು ಪ್ರಾಥಮಿಕ ಚಿಕಿತ್ಸಾಲಯವನ್ನು ಗೋಲಗೇರಿ ಗ್ರಾಮದಲ್ಲಿ ತೆರೆಯುತ್ತಿದ್ದ ಬಗ್ಗೆ ಒಂದು ಆಮಂತ್ರಣ ಪತ್ರಿಕೆಯನ್ನು ಕಳುಹಿಸಿದ್ದು ಮತ್ತು ಕೆ.ಪಿ.ಎಮ್.ಇ. ಕಾಯ್ದೆ ಅಡಿಯಲ್ಲಿ ನೊಂದಣಿ ಮಾಡಲು ಆರೋಪಿ ಈತನು ನನಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ದಿ: 18.02.2014 ರಂದು ನಾನು ನಾನು ಗೋಲಗೇರಿ ಗ್ರಾಮಕ್ಕೆ ಭೇಟಿ ನೀಡಿದಾಗ ಆರೋಪಿ ಈತನು ಈಗಾಗಲೇ ಚಿಕಿತ್ಸಾಲಯನ್ನು ನಡೆಸುತ್ತಿದ್ದನು. ಮತ್ತು ಅದರಲ್ಲಿ 5 ಹಾಸಿಗೆಯುಳ್ಳ ಕೋಣೆ ಮತ್ತು ಲ್ಯಾಬ ಸಹ ಪ್ರಾರಂಭಿಸಿದರು. ಆರೋಪಿ ಈತನು ಆಯುರ್ವೆದಿಕ ಪದವಿಯನ್ನು ಹೊಂದಿ ಅಲೋಪತಿಕ ಔಷಧಿಗಳನ್ನು ಉಪಯೋಗಿಸಿ ರೋಗಿಗೆಳಿಗೆ ನೀಡುತ್ತಿದ್ದರು. ನಾನು ಆರೋಪಿ ಈತನಿಗೆ ಪದವಿ ಬಗ್ಗೆ ವಿಚಾರಿಸಲಾಗಿ ಅವರು ಮಹಾರಾಷ್ಟ್ರ ರಾಜ್ಯದ ಕಾಲೇಜಿನ ಪದವಿಯನ್ನು ನನಗೆ ತೋರಿಸಲಾಗಿ ಅದು ಖೊಟ್ಟಿ ಇತ್ತು. ಮತ್ತು ಆರೋಪಿ ಈತನ ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ ತನ್ನ ವಿದ್ಯಾಭ್ಯಾಸ ಮಾಡಿದ ಬಗ್ಗೆ ನನಗೆ ತಿಳಿಸಿದ್ದು ಆ ಕುರಿತು ಪರಿಶೀಲಿಸಲಾಗಿ ಅದು ಸಹ ಖೊಟ್ಟಿ ಇರುತ್ತದೆ. ನಂತರ ಚಾ.ಸಾ. 2 ಮತ್ತು 3 ರವರ ಸಮಕ್ಷಮ ಅದೇ ದಿನ ಚಿಕಿತ್ಸಾಲಯನ್ನು ಬಂದು ಮಾಡಿ ಪೋಲಿಸ ಠಾಣೆಗೆ ಬಂದು ಆರೋಪಿಯ ವಿರುದ್ಧ ಪಿರ್ಯಾದಿ ನೀಡಿರುತ್ತೇನೆ.

ಪಿರ್ಯಾದಿ ನೋಡುತ್ತಿದ್ದು ಅದನ್ನು ನಿ.ಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.4 ಎ ಎಂದು, ದಿ: 17.02.2014 ರಂದುಆರೋಪಿ ಈತನು ನಮ್ಮ ಕಛೇರಿಗೆ ಕ್ಲಿನಿಕ ಅನುಮತಿ ಕುರಿತು ಬರೆದ ಪತ್ರ ದೃಢೀಕೃತ ನಕಲು ನೋಡುತ್ತಿದ್ದು ಅದನ್ನು ನಿ.ಪಿ.5 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.5 ಎ ಎಂದು, ಆರೋಪಿ ದಿ: 19.02.2014 ರಂದು ಧನ್ವಂತರಿ ಕ್ಲಿನಿಕ್ ತೆರೆಯಲು ನೀಡಿದ ಅರ್ಜಿಯ ದೃಢೀಕೃತ ನಕಲು ಅದನ್ನು ನಿ.ಪಿ.6 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.6 ಎ ಎಂದು , ಡಿ.ಡಿ.ಯ ದೃಢೀಕೃತ ನಕಲು ಅದನ್ನು ನಿ.ಪಿ.7 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.7 ಎ ಎಂದು, ಧನ್ವಂತರಿ ಕ್ಲಿನಿಕ್ ಚಾರ್ಜ ಪಟ್ಟಿಯನ್ನು ದೃಢೀಕೃತ ನಕಲು ಅದನ್ನು ನಿ.ಪಿ.8 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.8 ಎ ಎಂದು , ಬಾಡಿಗೆ ಪ್ರಮಾಣ ಪತ್ರದ ದೃಢೀಕೃತ ನಕಲು ಅದನ್ನು ನಿ.ಪಿ.9 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.9 ಎ ಎಂದು , ದಿ: 19.10.2013 ರಂದು ಆರೋಪಿ ನಮ್ಮ ಇಲಾಖೆಗೆ ಬರೆದ ಪತ್ರದ ದೃಢೀಕೃತ ನಕಲು ಅದನ್ನು ನಿ.ಪಿ.10 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.10 ಎ ಎಂದು ,ಆರೋಪಿ ನಮ್ಮ ಇಲಾಖೆಗೆ ಬರೆದುಕೊಟ್ಟ ಒಂದು ಛಾಪಾಕಾಗದ ಪತ್ರವನ್ನು ದೃಢೀಕೃತ ನಕಲು ಅದನ್ನು ನಿ.ಪಿ.11 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.11 ಎ ಎಂದು , ದಿ: 18.02.2014 ರಂದು ನಾನು ಆರೋಪಿಗೆ ಆಸ್ಪತ್ರೆಯ ನೊಂದಣಿಯನ್ನು ತೀರಸ್ಕರಿಸಿದ ಕುರಿತು ಪತ್ರದ ದೃಢೀಕೃತ ನಕಲು ಅದನ್ನು ನಿ.ಪಿ.12 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.12 ಎ ಎಂದು ,ದಿ: 18.02.2014 ರಂದು ಬೆಂಗಳೂರಿನ ಆರ್ಯುವೇದಿಕ ಮತ್ತು ಯೂನ್ಯಾನಿ ಬೋರ್ಡಗೆ ಬರೆದ ಇಮೇಲಿನ ದೃಢೀಕೃತ ನಕಲು ಅದನ್ನು ನಿ.ಪಿ.13 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.13 ಎ ಎಂದು, ಡಾ: ದೀಪಾ ಹಲಕೇರಿರವರ ರೆಗಿಸ್ಟರ ಆಪ್ ಫ್ಯಾಕ್ಟರಿಸನ ದೃಢೀಕೃತ ನಕಲು ಅದನ್ನು ನಿ.ಪಿ.14 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.14 ಎ ಎಂದು , ದಿ: 02.08.2013 ಮತ್ತು 18.02.2014 ರಂದು ಕರ್ನಾಟಕ ರಕ್ಷಣಾ ವೇದಿಕೆರವರು ನಮ್ಮ ಕಛೇರಿಗೆ ಬರೆದ ಪತ್ರದ ದೃಢೀಕೃತ ನಕಲು ಅದನ್ನು ನಿ.ಪಿ.15 ಮತ್ತು 16 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.15 ಎ ಮತ್ತು 16 ಎ, ಎಂದು , ಗುರುತಿಸಲಾಯಿತು.

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ರೂ. 500/- ಖರ್ಚಿನ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯಂತೆ ತೆರೆ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ.

**( ಎ.ಆರ್.ಎ.ಮುಲ್ಲಾ)**
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಸಿಂದಗಿ.